ಗ್ರಾಮೀಣಾಭಿವೃದ್ಧಿ ಕಛೇರಿಗಳಿಗೆ ಕಂಪ್ಯೂಟರೀಕರಣ.

1043 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗ್ರಾಮೀಣಾಭಿವೃದ್ಧಿ ಇಲಾಖಾ ಕಾರ್ಯದರ್ಶಿಗಳ ಕಚೇರಿಯನ್ನು ಕಂಪ್ಯೂಟರೀಕರಣ ಗೊಳಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ? ಕಂಪ್ಯೂಟರೀಕರಣಗೊಳಿಸಿದ್ದರೆ ವಿವಿಧ "ಇ-ಮೇಲ್" ವಿಳಾಸಗಳ ಮಾಹಿತಿಯನ್ನು ನೀಡುವುದು.*

ಆ) *ರಾಜ್ಯದಲ್ಲಿ ಜಿಲ್ಲಾ ಪಂಚಾಯತ್ ಆಡಳಿತ ವ್ಯವಸ್ಥೆಯಲ್ಲಿ ಕಂಪ್ಯೂಟರೀಕರಣಗೊಳಿಸುವ ಬಗ್ಗೆ ಸರ್ಕಾರ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಈ ಬಗ್ಗೆ ಸಾಧಿಸಿರುವ ಪ್ರಗತಿ ಏನು? ವಿವರ ನೀಡುವುದು.*

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಈಗಾಗಲೇ ಸಚಿವಾಲಯ, ಹಾಗೂ ಕಾರ್ಯದರ್ಶಿ ಮಟ್ಟದಲ್ಲಿ ಕಂಪ್ಯೂಟರೀಕರಣ ಗೊಳಿಸಲಾಗಿದೆ.ಕಾರ್ಯದರ್ಶಿಗಳ ಇ-ಮೇಲ್ ವಿಳಾಸಗಳು.

secrdpr(@)secreiat2.kar nic.in

adp(@)secreiat2.kar.nic in

ppmublr(@)br.vsnl.in

ಆ) ಪ್ರತಿ ಜಿಲ್ಲಾ ಪಂಚಾಯತಿಗಳಿಗೆ ಗಣಕೀಕರಣಕ್ಕಾಗಿ ರೂ.7.00 ಲಕ್ಷಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದ್ದು, ಗಣಕೀಕರಣ ಕಾರ್ಯ ಮುಗಿದಿದೆ ಆದರೆ ಉಡುಪಿ ಜಿಲ್ಲಾ ಪಂಚಾಯತ್ 31ನೇ ಮಾರ್ಚ್ 2000 ವೇಳೆಗೆ ಕಂಪ್ಯೂಟರ್ ಖರೀದಿಸಲು ಕ್ರಮ ಕೈಗೊಳ್ಳುತ್ತಿದ್ದಾರೆ.

ಇಲಾಖೆಯಲ್ಲಿರುವ ಎಲ್ಲಾ ಯೋಜನೆಗಳ ಸಮಗ್ರ ಮಾಹಿತಿ ಎಂದರೆ ಯೋಜನೆಗಳ ವಿವರ, ಅದಕ್ಕೆ ಒದಗಿಸಲಾಗಿರುವ ಆಯವ್ಯಯ ನಿಗದಿಪಡಿಸಿದ ಆರ್ಥಿಕ ಮತ್ತು ಭೌತಿಕ ಗುರಿ ಮತ್ತು ಸಾಧನೆ ಬಗ್ಗೆ ವಿವರಗಳನ್ನು ಗಣಕಯಂತ್ರದಲ್ಲಿ ಸಂಗ್ರಹಮಾಡಲಾಗಿದೆ.

ರಾಜ್ಯದಲ್ಲಿ ಜಾಗತಿಕ ಬ್ಯಾಂಕ್ ನೆರವಿನ ಯೋಜನೆಗಳು

1044 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ವಿವಿಧ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಜಾಗತಿಕ ಬ್ಯಾಂಕ್ ನೆರವಿನ ಯೋಜನೆಗಳು (ನೀರು ಸರಬರಾಜು ಮತ್ತಿತರ) ಅನುಷ್ಠಾನಗೊಳ್ಳಲು ವಿಳಂಬವಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ? (ಯೋಜನೆಗಳ ವಿವರವನ್ನು ನೀಡುವುದು)*

ಅ) ಈ ವಿಳಂಬಕ್ಕೆ ಕಾರಣಗಳೇನು?

ಇ) ಈ ವಿಳಂಬ ನಿವಾರಣೆಗೆ ಸರ್ಕಾರ ತೆಗೆದುಕೊಂಡ ಕ್ರಮವೇನು? ಇವುಗಳನ್ನು ಯಾವಾಗ ಪೂರ್ತಿಗೊಳಿಸಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :

ಅ) ಪ್ರಾರಂಭಿಕ ಹಂತದಲ್ಲಿ ವಿವಿಧ ಕಾರಣಗಳಿಗಾಗಿ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಯೋಜನಾ ಗ್ರಾಮಗಳ ವಿವರಗಳು

1. ಪೈಲಟ್ ಗ್ರಾಮಗಳು	10
2. ಹಂತ-1	237
3. ಹಂತ-2	864
ಒಟ್ಟು	**1111**

ಆ) ಜನ ಸಮುದಾಯದಿದ ನೈರ್ಮಲ್ಯ ಕಾಮಗಾರಿಗಳಿಗೆ ಕಡ್ಡಾಯ ವಂತಿಕೆಯ ಹಣವನ್ನು ಪಡೆಯಲು ಕೆಲವು ಗ್ರಾಮಗಳಲ್ಲಿ ವಿಳಂಬವಾಗಿರುತ್ತದೆ.

ವಿಶ್ವಬ್ಯಾಂಕ್ ಯೋಜನೆಯಲ್ಲಿ ಒಳಗೊಂಡಿರುವ ಬೇರೆ ಬೇರೆ ಷರತ್ತುಗಳು ಮತ್ತು ವಿಧಿವಿಧಾನಗಳು

ಜಲಮೂಲಗಳನ್ನು ಇತ್ಯರ್ಥಗೊಳಿಸಲು ಕೆಲವು ಗ್ರಾಮಗಳಲ್ಲಿ ವಿಳಂಬವಾಗಿದೆ.

ಕೆಲವು ಗ್ರಾಮಗಳಲ್ಲಿ ತೋಡಿರುವ ಕೊಳವೆ ಬಾವಿಗಳಲ್ಲಿ ನೀರು ಇಂಗಿಹೋಗಿ ಮತ್ತೊಂದು ಜಲಮೂಲವನ್ನು ಇತ್ಯರ್ಥಗೊಳಿಸುವ ಅಗತ್ಯ ಉಂಟಾಯಿತು.

ಈ ಕಾಮಗಾರಿಗಳ ಕೆಲವು ಗುತ್ತಿಗೆದಾರರ ಮಂದಗತಿಯ ಪ್ರಗತಿಯಿಂದಾಗಿ ವಿಳಾಂಬ -ವಾಗಿರುತ್ತದೆ ಹಾಗೂ ಕೆಲವು ಯೋಜನೆಗಳಿಗೆ ವಿದ್ಯುತ್ ಒದಗಿಸಲು ಗಣನೀಯ ಸಮಯ ತಗಲಿರುತ್ತದೆ.

ಪೂರ್ಣಗೊಂಡಿರುವ ಕೆಲವು ಗ್ರಾಮಗಳಲ್ಲಿ ಗ್ರಾಮದ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಯು ಯೋಜನೆಗಳ ಉಸ್ತುವಾರಿಯನ್ನು ಪಡೆದುಕೊಳ್ಳುವಲ್ಲಿ ವಿಳಂಬವಾಗಿರುತ್ತದೆ.

ಈ ಹಲವು ಕಾರಣಗಳಿಂದ ಮೇಲಿನ ಯೋಜನೆಯನ್ನು ಕೆಲವು ಗ್ರಾಮಗಳಲ್ಲಿ ನಿಗದಿತ ಸಮಯದಲ್ಲಿ ಕಾರ್ಯಗತಗೊಳಿಸಲು ಸಾಧ್ಯವಾಗಲಿಲ್ಲ.

ಇ) ಮೇಲ್ಕಂಡ ಕಾರಣಗಳನ್ನು ಗುರುತಿಸಿ ಅವುಗಳನ್ನು ಪರಿಹರಿಸಿ ಯೋಜನೆಯ ಅನುಷ್ಠಾನವನ್ನು ತ್ವರಿತಗೊಳಿಸಲು ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ಅ. 1. ವಂತಿಕೆಯನ್ನು ಪಡೆಯಲು ಆದಷ್ಟು ಗ್ರಾಮಗಳಲ್ಲಿ ಜನರನ್ನು ಪ್ರೋತ್ಸಾಹಿಸಿ ಹಣವನ್ನು ಸಂಗ್ರಹಣೆ ಮಾಡಿ ಯೋಜನೆಗಳನ್ನು ಕಾರ್ಯಗತಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

2. ಜಲಮೂಲಗಳನ್ನು ಇತ್ಯರ್ಥಗೊಳಿಸಲು ಆಧುನಿಕ ಮಾರ್ಗಗಳನ್ನು ಅನುಸರಿಸಿ ಇತ್ಯರ್ಥಗೊಳಿಸಲಾಗಿದೆ.

3. ಜಲಾನಯನ ಪ್ರದೇಶವನ್ನು ಅಭಿವೃದ್ಧಿಗೊಳಿಸಿ ಜಲಸಂಗ್ರಹವನ್ನು ಹೆಚ್ಚಿಸಲಾಗಿದೆ.

4. ವಿದ್ಯುತ್ ಸರಬರಾಜನ್ನು ಶೀಘ್ರವಾಗಿ ಪಡೆಯಲು ಕ್ರಮ ತೆಗೆದುಕೊಳ್ಳಲಾಗಿದೆ.

5. ನೀರು ಸರಬರಾಜು ಸಮಿತಿಗಳನ್ನು ಪ್ರೋತ್ಸಾಹಿಸಿ ಯೋಜನೆಗಳನ್ನು ವಹಿಸಿಕೊಡಲಾಗಿದೆ.

6. ಗುತ್ತಿಗೆದಾರರ ಮೇಲೆ ನಿಯಮಾನುಸಾರ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗಿದೆ. ಕೆಲವು ಗುತ್ತಿಗೆಗಳನ್ನು ರದ್ದುಮಾಡಿ ಇಲಾಖಾ ವತಿಯಿಂದ ಕೆಲಸವನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ ಅಲ್ಲದೆ ಕೆಲವೊಂದು ಹಳ್ಳಿಗಳ ಕಾಮಗಾರಿಯನ್ನು ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಗಳಿಂದ ಅನುಷ್ಠಾನಗೊಳಿಸಲಾಗುತ್ತಿದೆ.

7. ಬದಲಿ ಜಲಮೂಲಗಳನ್ನು ಹೊಂದಿಸಲಾಗಿದೆ.

ಆ. 1. 10 ಪೈಲಟ್ ಗ್ರಾಮಗಳಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

2. ಮೊದಲ ಹಂತದ 184 ಗ್ರಾಮಗಳಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ ಉಳಿದ 53 ಗ್ರಾಮಗಳಲ್ಲಿ ಕಾಮಗಾರಿಗಳನ್ನು ಏಪ್ರಿಲ್ 2000ರಲ್ಲಿ ಪೂರ್ಣಗೊಳಿಸಲು ಎಲ್ಲ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

3. ಎರಡನೇ ಹಂತದ 393 ಗ್ರಾಮಗಳಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಉಳಿದ 471 ಗ್ರಾಮಗಳಲ್ಲಿ ಕಾಮಗಾರಿಗಳನ್ನು ಜೂನ್ 2000ರಲ್ಲಿ ಪೂರ್ಣಗೊಳಿಸಲು ಎಲ್ಲ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ನೇತಾಜಿ ಸುಭಾಷ್ ಚಂದ್ರ ಬೋಸ್ ಪ್ರೌಢಶಾಲಾ ಕಟ್ಟಡಗಳು

1046 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಪ್ರೌಢಶಾಲೆಗಳಿಗೆ ನೇತಾಜಿ ಸುಭಾಷ್ ಚಂದ್ರ ಬೋಸರ ಹೆಸರಿನಲ್ಲಿ ಶಾಲಾ ಕಟ್ಟಡಗಳಿಗೆ ಈವರೆಗೆ ಮಂಜೂರಾತಿ ನೀಡಲಾಗಿದೆ?